**ದಿಃ 18-12-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3ನೇ ಆರೋಪಿತರ ಪರ ವಕೀಲರಾದ ಶ್ರೀ ಎಂ ಎಸ್ ಎಸ್ ರವರಿಂದ**

ನಾನು ವ್ಯಾಪಾರ ಮಾಡಿಕೊಂಡಿದ್ದೇನೆ. 1ನೇ ಆರೋಪಿತನನ್ನು ಪ್ರಥಮವಾಗಿ ನನ್ನ ಮಗಳು ನೋಡಿದ್ದು ಜುಲೈ ತಿಂಗಳ 2020ರಂದು. ನನ್ನ ಮಗಳು 1ನೇ ಆರೋಪಿತನನ್ನು ಅರ್ಥ ಮಾಡಿಕೊಂಡು ಮದುವೆಗೆ ಒಪ್ಪಿದಳು. ಮೊದಲಿಗೆ ಆರೋಪಿತರು ನಮ್ಮ ಮಗಳಿಗೆ ಯಾವುದೇ ವರದಕ್ಷಿಣೆ ನೀಡುವುದು ಬೇಡಾ ಅಂತ ನನಗೆ ತಿಳಿಸಿದ್ದರು ಎಂದರೆ ಸರಿ. ನಿಶ್ಚಿತಾರ್ಥಕ್ಕೆ ಹಾಕಿದಂತಹಾ ಚಿನ್ನ ನನ್ನ ಮಗಳು ಮತ್ತು 1ನೇ ಆರೋಪಿ ಜೊತೆಗೆ ಹೋಗಿ ಉಡುಪಿಗೆ ಹೋಗಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ನಿಶ್ಚಿತಾರ್ಥ ಸಮಯದಲ್ಲಿ ಯಾವುದೇ ಚಿನ್ನ ನನ್ನ ಮಗಳಿಗೆ ಹಾಕಿಲ್ಲ ಅಂತ ನುಡಿಯುತ್ತಾರೆ. ನಾನು 1ನೇ ಆರೋಪಿತನಿಗೆ ಒಂದು ಬ್ರೇಸ್ ಲೇಟ್, ಚಿನ್ನದ ಸರ ಮತ್ತು ಉಂಗುರ ಕೊಟ್ಟಿದ್ದೇನೆ ಅಂತ ಹೇಳುವಂತಹಾ ಚಿನ್ನ ಎಲ್ಲಿಂದ ಖರೀದಿ ಮಾಡಿದ್ದೀರಿ ಆ ಬಗ್ಗೆ ದಾಖಲಾತಿ ನಿಮ್ಮ ಬಳಿ ಇದೆಯಾ ಎಂದು ಸಾಕ್ಷಿಗೆ ಕೇಳಿದಾಗ ಸಾಕ್ಷಿ ಯಾವುದೇ ದಾಖಲಾತಿ ನನ್ನ ಹತ್ತಿರ ಇಲ್ಲಾ ಮತ್ತು ಅದನ್ನು ನಾನು ತನಿಖಾಧಿಕಾರಿಗೆ ನೀಡಿಲ್ಲ ಅಂತ ನುಡಿಯುತ್ತಾರೆ. ಸದ್ರಿ ಬಂಗಾರದ ಒಡವೆಗಳ ತೂಕ ಅಂದಾಜಿಗೆ ನನಗೆ ಗೊತ್ತುಂಟು ಆದರೆ ನಿರ್ಧಿಷ್ಟವಾಗಿ ಅದರ ತೂಕ ಗೊತ್ತಿಲ್ಲ. ಸಾಕ್ಷಿ ಮುನ್ನುಡಿದು ಅದು ಒಟ್ಟು 24 ಗ್ರಾಂ ತೂಕದ್ದಾಗಿದೆ ಅಂತ ನುಡಿಯುತ್ತಾರೆ. ಅದನ್ನು ಖರೀದಿ ಮಾಡುವಾಗ ಎಷ್ಟು ಹಣ ಕೊಟ್ಟಿದ್ದೇನೆ ಎನ್ನುವ ಬಗ್ಗೆ ನನಗೆ ನೆನಪಿಲ್ಲ. ಮತ್ತು ಆ ಸಮಯದಲ್ಲಿ ಸದ್ರಿ ತೂಕದ ಚಿನ್ನಕ್ಕೆ ಎಷ್ಟು ಬೆಲೆ ಇತ್ತು ಎನ್ನುವ ಬಗ್ಗೆ ನನಗೆ ನೆನಪಿಲ್ಲ. ನಾನು ಹೇಳಿದಂತೆ ಯಾವುದೇ ಚಿನ್ನ 1ನೇ ಆರೋಪಿ ಬೇಡಾ ಎಂದಿದ್ದರಿಂದ ಅವನಿಗೆ ನೀಡಿಯೇ ಇಲ್ಲಾ ಎಂದರೆ ಸರಿ ಅಲ್ಲಾ. ನಿಶ್ಚಿತಾರ್ಥ ಸಮಯದಲ್ಲಿ ಎಲ್ಲಾ ಖರ್ಚುಗಳನ್ನು ಆರೋಪಿತನೇ ನೋಡಿಕೊಂಡಿದ್ದಾನೆ ಎಂದರೆ ಸರಿ ಅಲ್ಲಾ. ನಿಶ್ಚಿತಾರ್ಥ ಆದ ನಂತರ ಸಿದ್ದಾಪುರದ ನನ್ನ ಹೆಂಡತಿ ಮನೆಯಲ್ಲಿ ಅವರು ನಮ್ಮ ಕುಟುಂಬದವರಿಗೆ ಔತಣಕ್ಕೆ ಕರೆದಿದ್ದು ಆ ಸಮಯದಲ್ಲಿ 1ನೇ ಆರೋಪಿ ಮಾತ್ರ ಸದ್ರಿ ಔತಣಕ್ಕೆ ಬಂದಿದ್ದ. ನಿಶ್ಚಿತಾರ್ಥ ಆದ ನಂತರ ಒಂದೂವರೆ ತಿಂಗಳಲ್ಲಿ ನಮ್ಮ ಕುಟುಂಬದವರು ಮತ್ತು ಆರೋಪಿತರ ಕುಟುಂಬದವರ ನಡುವೆ

ಒಳ್ಳೆಯ ಸಂಬಧ ಇತ್ತು. ನನ್ನ ಮಗಳು ತನ್ನ ಜೀವನದ ಕೊನೆಯವರೆಗೆ ತನಗೆ ಸಂಬಂಧ ಇಷ್ಟ ಇಲ್ಲಾ ಅಂತ ನಮಗೆ ಹೇಳಿಲ್ಲ. ನಿಶ್ಚಿತಾರ್ಥ ಆದ ಒಂದೂವರೆ ತಿಂಗಳ ಮೇಲೆ ಅಕ್ಟೋಬರ್ ತಿಂಗಳಿನಲ್ಲಿ 1 ನೇ ಆರೋಪಿ ತನಗೆ ಹಿಂಸೆ ಕೊಡುತ್ತಿದ್ದಾನೆ ಅಂತ ನಮಗೆ ತಿಳಿಸಿದ್ದಳು. ಸಾಕ್ಷಿ ಮುನ್ನುಡಿದು ವಿವರವಾಗಿ ನನ್ನ ಹೆಂಡತಿಗೆ ಹೇಳಿದ್ದಾಳೆ ಆದರೆ ನನಗೆ ಖಾಲೀ ಹಿಂಸೆ ಕೊಡುತ್ತಿದ್ದಾನೆ ಅಂತ ಮಾತ್ರ ತಿಳಿಸಿದ್ದಾಳೆ. ನಾನು ನನ್ನ ಮಗಳಿಗೆ ವಿವರವಾಗಿ ಕೇಳಲಿಕ್ಕೆ ಪ್ರಯತ್ನ ಮಾಡಿಲ್ಲ. ನಾನು ಆರೋಪಿತನಿಗೆ ನನ್ನ ಮಗಳು ಹೇಳಿದ ವಿಷಯದ ಬಗ್ಗೆ ಕೇಳಲಿಕ್ಕೆ ಪ್ರಯತ್ನ ಮಾಡಲಿಲ್ಲ, ನಾನು ನನ್ನ ಮಗಳಿಂದ ವಿಷಯ ತಿಳಿದುಕೊಂಡು ಮದುವೆಗೆ ಮಧ್ಯವರ್ತಿಯಾಗಿದ್ದಂತಹಾ ವಸಂತ್ ಕಾಮತ್ ರವರ ಹತ್ತಿರ ಸಹಾ ಆರೋಪಿತನು ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದಾನೆ ಎನ್ನುವ ವಿಷಯ ತಿಳಿಸಿಲ್ಲ. ಸದ್ರಿ ನನ್ನ ಮಗಳಿಗೆ 1 ನೇ ಆರೋಪಿ ಕಿರುಕುಳ ಕೊಡುತ್ತಿದ್ದ ವಿಷಯವನ್ನು ನಮ್ಮ ಕುಟುಂಬದ ಸದಸ್ಯರ ಜೊತೆಯಲ್ಲೂ ನಾನು ವಿಮರ್ಶೆ ಮಾಡಿಲ್ಲ.

ನನ್ನ ಮಗಳು ಮೃತಪಟ್ಟ ಮಾರನೆ ದಿವಸ ಬೆಳಿಗ್ಗೆ 9.30 ಗಂಟೆಗೆ ನಾನು ಫಿರ್ಯಾದಿ ನೀಡಿರುತ್ತೇನೆ. ನನ್ನ ಮಗಳು ತೀರಿಕೊಂಡ ನಂತರ ಮತ್ತು ನಾನು ಫಿರ್ಯಾದಿ ಕೊಡುತ್ತಿದ್ದ ಮುಂಚೆ ಆರೋಪಿ ಕಿರುಕುಳ ಕೊಟ್ಟ ಬಗ್ಗೆ ನಮ್ಮ ಕುಟುಂಬದ ಸದಸ್ಯರಲ್ಲಿ ಮತ್ತು ಸಂಬಂಧಿಕರಲ್ಲಿ ಸದ್ರಿ ವಿಷಯದ ಬಗ್ಗೆ ಚರ್ಚೆ ಮಾಡಿಲ್ಲ. ಫಿರ್ಯಾದಿ ನೀಡಲು ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಸತೀಶ್ ಪೋಲೀಸು ಠಾಣೆಗೆ ಹೋಗಿರುತ್ತೇವೆ. ನಾನು ಬಿ.ಎ ಪಧವೀಧರನಾಗಿದ್ದೇನೆ. ನಿಪಿ-1 ಯುಡಿಆರ್ ಫಿರ್ಯಾದಿಯನ್ನು ನಾನು ನನ್ನ ಕೈ ಬರಹದಲ್ಲಿ ಬರೆದುಕೊಟ್ಟಿದ್ದೇನೆ. ಆ ಸಮಯದಲ್ಲಿ ನನಗೆ ಯಾರಿಂದ ಯಾವುದೇ ಒತ್ತಡ ಇರಲಿಲ್ಲ. ನನ್ನ ಮಗಳು ಸಾಯುವ ಪೂರ್ವದಲ್ಲಿ ನಾವು ಬೇರೆ ವರ ಹುಡುಕಲಿಕ್ಕೆ ಹೋಗಿಲ್ಲ. ಪ್ರಥಮವಾಗಿ ನಿಪಿ-1 ಫಿರ್ಯಾದಿ ನೀಡುವಾಗ ನಾನು ಆರೋಪಿತರ ವಿರುದ್ಧ ಯಾವುದೇ ಆಪಾದನೆ ಹಾಕಿಲ್ಲ ಎಂದರೆ ಸರಿ. ನನ್ನ ಮಗಳಿಗೆ ಸಂಬಂಧಪಟ್ಟ ಮೊಬೈಲನ್ನು ನಾನು ತನಿಖಾಧಿಕಾರಿಯವರಿಗೆ ತನಿಖೆ ಸಮಯದಲ್ಲಿ ನೀಡಿದ್ದೇನೆ. ನಿಶ್ಚಿತಾರ್ಥ ಆದ ನಂತರ ನನ್ನ ಮಗಳು 1 ನೇ ಆರೋಪಿ ಜೊತೆಗೆ ಹೊರಗಡೆ ತಿರುಗಾಡಲು ಹೋಗುತ್ತಿದ್ದಳು. ನನ್ನ ಮಗಳು ನನಗೆ 1 ನೇ ಆರೋಪಿತನ ವರ್ತನೆ ಸರಿ ಇಲ್ಲಾ ಅಂತ ನನ್ನ ಮುಂದೆ ಹೇಳಿದ್ದಳು. ನನ್ನ

ಮಗಳು 1ನೇ ಆರೋಪಿ ವಿಕೃತ ಕಾಮಿಯಾಗಿ ನಡೆದುಕೊಳ್ಳುತ್ತಾನೆ ಅಂತ ನನಗೆ ತಿಳಿಸಿರುತ್ತಾಳೆ. ನಾನು ಅವಳಿಗೆ ಅವೆಲ್ಲಾ ಸರಿ ಆಗುತ್ತದೆ ಅಂತ ನಾನು ಬುದ್ಧಿವಾದ ಹೇಳಿದ್ದೆ. ಆ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ತನಿಖೆ ಮಾಡಲು ಹೋಗಿಲ್ಲ. ಈ ವಿಷಯ ಅವಳು ಸಾಯುವ ಒಂದು ವಾರದ ಮುಂಚೆ ನನ್ನ ಮಗಳು ತಿಳಿಸಿರುತ್ತಾಳೆ.

ನನ್ನ ಮಗಳ ಶವದ ಪಂಚನಾಮೆ ಆಗುವ ಸಮಯದಲ್ಲಿ ನಮ್ಮ ಸಂಬಂಧಿಕರು ಸೇರಿದ್ದರು. ಆ ಸಮಯದಲ್ಲಿ ನಾವಾಗಲೀ, ನಮ್ಮ ಸಂಬಂಧಿಕರಾಗಲೀ ಆರೋಪಿತರ ವಿರುದ್ಧ ತಕರಾರು ಮಾಡಿಲ್ಲ. ಮಗಳು ಮೃತಪಟ್ಟ 3 – 4 ದಿವಸದ ಒಳಗೆ ಅವಳ ಸಾವಿನ ಬಗ್ಗೆ ಚರ್ಚೆ ಮಾಡಿದ್ದೇವೆ. ಸದ್ರಿ 3 – 4 ದಿವಸದಲ್ಲಿ ಆರೋಪಿತರ ವಿರುದ್ಧ ಫಿರ್ಯಾದಿ ಕೊಡಬೇಕು ಅಂತ ಯಾರೂ ಪ್ರಸ್ತಾಪ ಮಾಡಿಲ್ಲ. ನನ್ನ ಮಗಳ 12 ದಿವಸದ ಕ್ರಿಯೆ ಆದ ನಂತರ ವಕೀಲರನ್ನು ಭೇಟಿ ಆಗಿ ಯಾವ ರೀತಿ ಮುಂದುವರಿಯಬೇಕು ಅಂತ ಸಲಹೆ ಪಡೆದುಕೊಂಡಿದ್ದೇನೆ. 4 – 5 ಜನರು ಒಟ್ಟಾಗಿ ನಾವು ವಕೀಲರನ್ನು ಭೇಟಿಯಾಗಲು ಹೋಗಿದ್ದೇವೆ. ನಿಪಿ-2 ಫಿರ್ಯಾದಿಯನ್ನು ಪೋಲೀಸು ಠಾಣೆಯಲ್ಲಿ ಬೆರಳಚ್ಚು ಮಾಡಲಾಗಿದೆ. ವಕೀಲರು ಫಿರ್ಯಾದಿ ನೀಡುವ ಸಂಬಂಧವಾಗಿ ಸಲಹೆ ನೀಡಿದ್ದಾರೆ. ನಾವು ನೀಡಿದ ಸಲಹೆ ಎಲ್ಲಿ ಬೆರಳಚ್ಚು ಮಾಡಲಾಗಿತ್ತು ಅಂತ ನನಗೆ ನೆನಪಿಲ್ಲ. ನಾವು 2 – 3 ಜನ ಮಾಹಿತಿ ನೀಡಿದ ಮೇರೆಗೆ ವಕೀಲರು ಸಲಹೆ ನೀಡಿರುತ್ತಾರೆ. ನಿಪಿ-2 ಫಿರ್ಯಾದಿನಲ್ಲಿ ಬರೆದಂತಹಾ ವಿಷಯಗಳಲ್ಲಿ ಸತ್ಯತೆ ಇದೆಯೋ ಇಲ್ಲವೋ ಅಂತ ನೀವು ಏನಾದರೂ ತಿಳಿದುಕೊಂಡಿದ್ದೀರಾ ಅಂತ ಸಾಕ್ಷಿಗೆ ಕೇಳಿದಾಗ ಸಾಕ್ಷಿ ಮೊದಲನೇ ಫಿರ್ಯಾದಿ ನಿಪಿ-1 ನೀಡುವಾಗ ನಾನು 1ನೇ ಆರೋಪಿ ಮತ್ತು ಅವರ ಕುಟುಂಬದ ವಿರುದ್ಧ ಯಾವುದೇ ಆರೋಪ ಮಾಡಿಲ್ಲ ಆದರೆ 2ನೇ ಫಿರ್ಯಾದಿ ನೀಡುವಾಗ ವಿಷಯ ತಿಳಿದುಕೊಂಡು ನಾನು ಫಿರ್ಯಾದಿ ನೀಡಿದ್ದೇನೆ ಅಂತ ನುಡಿಯುತ್ತಾರೆ. ನನ್ನ ಮಗಳು ತೀರಿಕೊಂಡ ನಂತರ 4 ದಿವಸದೊಳಗೆ ನಾನು ನನ್ನ ಹೆಂಡತಿ ಮುಖಾಂತರ ಮಾಹಿತಿಯನ್ನು ತಿಳಿದುಕೊಂಡು ನಂತರ ಫಿರ್ಯಾದಿ ನೀಡಿದ್ದೇನೆ. ನನಗೆ ಈ ಪ್ರಕರಣದ ಮಾಹಿತಿ ಗೊತ್ತಾಗಿದ್ದು ನನ್ನ ಹೆಂಡತಿ ಮುಖಾಂತರ. ನಾನು ಫಿರ್ಯಾದಿ ನೀಡಿದ ನಂತರ ಪೋಲೀಸರು ಮಹಜರಿಗೆ ಬಂದದ್ದು ಬಿಟ್ಟರೆ ನಾನು ಪೋಲೀಸರಿಗೆ ಯಾವುದೇ ಹೇಳಿಕೆ

ನೀಡಿಲ್ಲ. ಪಂಚನಾಮೆಯನ್ನು ಪೋಲೀಸರು ಮನೆಗೆ ಬಂದು ಮಾಡಿರುತ್ತಾರೆ ಆದರೆ ಯಾರ ಹೇಳಿಕೆ ಮೇರೆಗೆ ಪಂಚನಾಮೆ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಆ ಸಮಯದಲ್ಲಿ ಅಕ್ಕಪಕ್ಕದಲ್ಲಿ ವಾಸವಾಗಿದ್ದ ಇಬ್ಬರು ಜನರು ಪಂಚನಾಮೆಗೆ ಬಂದಿದ್ದರು ಅಂತ ನುಡಿಯುತ್ತಾರೆ. ಪಂಚನಾಮೆಯ ವೈಯುಕ್ತಿಕ ಮಾಹಿತಿ ನನಗೆ ಗೊತ್ತಿದೆ. ನನ್ನ ಮಗಳು ಮೃತಪಟ್ಟ 10 ದಿವಸದ ಮೇಲೆ ನನಗೆ ಆರೋಪಿತರ ವಿರುದ್ಧ ಫಿರ್ಯಾದಿ ನೀಡಬೇಕು ಅಂತ ನಾನೇ ಯೋಚಿಸಿ ವಕೀಲರಿಗೆ ಸಲಹೆ ನೀಡಿದ್ದೇನೆ. ನನ್ನ ಮಗಳ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ ಅಲ್ಲಾ. ನನ್ನ ಮಗಳ ಸಾವಿಗೆ ಆರೋಪಿತರು ಯಾವುದೇ ರೀತಿಯಲ್ಲಿ ಕಾರಣರಾಗಿರುವುದಿಲ್ಲ ಎಂದರೆ ಸರಿ ಅಲ್ಲಾ. ನನ್ನ ಮಗಳಿಗೆ 1ನೇ ಆರೋಪಿ ಯಾವತ್ತೂ ಮದುವೆಯಾಗುವುದಿಲ್ಲ ಅಂತ ಹೇಳಿಲ್ಲ ಮತ್ತು ಅವಳಿಗೆ ಯಾವತ್ತೂ ಯಾವುದೇ ರೀತಿಯಾದ ಬಾಯಿ ಮಾತಿನಿಂದ ಕೆಟ್ಟ ಶಬ್ದಗಳನ್ನು ಆಡಿಲ್ಲ ಎಂದರೆ ಸರಿ ಅಲ್ಲಾ. ಮತ್ತು ಮೊಬೈಲ್‌ನಿಂದಲೂ ಸಹಾ ನನ್ನ ಮಗಳಿಗೆ ಆರೋಪಿಗಳು ಕೆಟ್ಟ ಮಾತಿನಿಂದ ಬೈದು ಅವಳಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿ ಅಲ್ಲಾ. ಆರೋಪಿತರು ನನ್ನ ಮಗಳ ಸಾವಿಗೆ ಕಾರಣಕರ್ತರಾಗಿರುವುದಿಲ್ಲ ಎಂದರೆ ಸರಿ ಅಲ್ಲಾ.

**<u>ಮರು ವಿಚಾರಣೆಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**